ಕಲೆಯನ್ನು ಸಿದ್ಧಿಸಿಕೊಂಡಿದ್ದ. ಮಧ್ಯಮ ವರ್ಗದ ತನ್ನ ಕುಟುಂಬವನ್ನು ಅಚ್ಚುಕಟ್ಟಾಗಿ ನಡೆಸುತ್ತಿದ್ದ. ಆತನಿಗೆ ಹೊಲ-ಗದ್ದೆ ಕಡಿಮೆ ಇತ್ತು. ಆದರೆ ತಮ್ಮ ವಂಶದಲ್ಲಿ ಸಾಗಿಬಂದಿದ್ದ ನೃತ್ಯ ನಟರಾಜನ ಮೂರ್ತಿ ಕೆತ್ತನೆ ಕಾರ್ಯವನ್ನು ಮುಂದುವರಿಸಿದ್ದ. ಅವನ ತಂದೆಯವರು ಅವರ ತಂದೆಯಿಂದ ಅದನ್ನು ಕಲಿತಿದ್ದರು. ಇವನೂ ತನ್ನ ತಂದೆಯಿಂದ ಬಾಲ್ಯದಿಂದಲೂ ಕಲಿತು ನಟರಾಜನ ಕೆತ್ತನೆಯ ಮೂರ್ತಿಯನ್ನು ಅಪೂರ್ವವಾಗಿ ಮಾಡುತ್ತಾ ಬಂದಿದ್ದನು. ಅವನ ಈ ಮೂರ್ತಿಯ ಕಲಾಕೃತಿಗೆ ಅಪಾರ ಬೇಡಿಕೆ ಇತ್ತು. ಅದನ್ನು ತಂತಮ್ಮ ಮನೆಗಳಲ್ಲಿ ಇಟ್ಟುಕೊಳ್ಳಲು ಎಲ್ಲರೂ ಇಷ್ಟಪಡುತ್ತಿದ್ದರು. ಅದರ ಕೆತ್ತನೆಗೆ ಹದವಾದ ಶ್ರೀಗಂಧದ ಮರವನ್ನೇ ಆತ ಬಳಸುತ್ತಿದ್ದ. ಅದರ ಕೆಲಸದಲ್ಲಿ ಅವನ ಪ್ರತಿಭಾ ಸೌಂದರ್ಯ ಮೈದಾಳುತ್ತಿತ್ತು. ಅದರಲ್ಲೂ ವಿಶೇಷವಾಗಿ ನೃತ್ಯ ಮಾಡುತ್ತಿರುವ ನಾಟ್ಯ ನಟರಾಜನ ಪ್ರತಿಮೆಯಲ್ಲಿ ಇಡೀ ವಿಶ್ವವನ್ನೇ ಅಡಗಿಸಿ ಅವನು ಕೆತ್ತುತ್ತಿದ್ದರಿಂದ ನಟರಾಜನ ಪ್ರತಿಮೆಯಲ್ಲಿ ಸೃಷ್ಟಿ, ನಾದ, ಬಿಂದುಗಳ ಸ್ವರೂಪವೇ ಮೈವೆತ್ತಿರುತ್ತಿತ್ತು. ಆತ ನಟರಾಜನ ಕೈಗಳಲ್ಲಿರುತ್ತಿದ್ದ ಹಲವಾರು ಆಯುಧಗಳಲ್ಲಿ ಸಮತೋಲನವನ್ನು ತರುತ್ತಿದ್ದರಿಂದ ಅದು ಅದ್ಭುತವಾಗಿರುತ್ತಿತ್ತು. ಮನುಷ್ಯರಲ್ಲಿ ಅಡಗಿರುವ ರಾಕ್ಷಸ ಗುಣಗಳನ್ನು, ಮೃಗೀಯ ಅಂಶಗಳನ್ನು ತುಳಿದು ನಾಶ ಮಾಡುತ್ತಿರುವಂತೆ ಅದರ ಭಂಗಿಯಲ್ಲಿ ಚಲನೆಯ ಲಯವನ್ನು ತರುತ್ತಿದ್ದನು. ಅದರ ಹೆಜ್ಜೆಗಳಲ್ಲಿ ತಾಂಡವ ನೃತ್ಯದ ಕುಣಿತದ ಆಯಾಮವನ್ನು ವಿಶೇಷವಾಗಿ ಹೊರಹೊಮ್ಮಿಸಿ ಕೆತ್ತನೆ ಮಾಡುವುದರಲ್ಲಿ ನಿಷ್ಣಾತನಾಗಿದ್ದನು. ಇಂತಹ ಕಲಾಕೃತಿ ಯಾರಿಗೆ ಇಷ್ಟ ಆಗುವುದಿಲ್ಲ? ಅದು ಎಂಥವರನ್ನೂ ಆಕರ್ಷಿಸುತ್ತಿತ್ತು. ಅದರಿಂದ ಅವನಿಗೆ ಸಾಕಷ್ಟು ಆದಾಯವೂ ಬರುತ್ತಿತ್ತು. ಗಿರಾಕಿಗಳು ಅವನ ಮನೆಗೇ ಬಂದು ಮುಂಗಡ ಹಣ ಕೊಟ್ಟು ಮಾಡಿಕೊಡಲು ಹೇಳಿ ಹೋಗುತ್ತಿದ್ದರು. ಆದರೆ ಅವನು ಎಂದೂ ತನ್ನ ಕಲಾಕೃತಿಯನ್ನು ಸಂತೆಯಲ್ಲಿ, ಜಾತ್ರೆಯಲ್ಲಿ, ವ್ಯಾಪಾರಿಗಳ ಬಳಿಯಲ್ಲಿ ಮಾರಲು ಹೋಗುತ್ತಿರಲಿಲ್ಲ. ಹೀಗೇ ಅವನ ಈ ಕೆತ್ತನೆಯ ಕೆಲಸ ತನ್ನ ಕೃಷಿ ಚಟುವಟಿಕೆಗಳ ಜೊತೆ ಜೊತೆಯಲ್ಲಿಯೇ ಸಾಗುತ್ತಿತ್ತು. ಮಗನೂ ಅದನ್ನು ಅವನಿಂದ ಕಲಿಯುತ್ತಾ, ವ್ಯವಸಾಯವನ್ನೂ ನೋಡಿಕೊಳ್ಳುತ್ತಾ ತಂದೆಗೆ ಸಹಕಾರಿಯಾಗಿದ್ದನು.

ಶಿವ, ರಾಮನಷ್ಟು ದೈಹಿಕವಾಗಿ ಬಲಿಷ್ಠನಾಗಿರಲಿಲ್ಲ. ಐದೂಕಾಲು ಅಡಿ ಎತ್ತರದ, ಎಣ್ಣೆಗೆಂಪಿನ, ಬೋಳುತಲೆಯ ಮನುಷ್ಯ. ನೆರೆಹೊರೆಯವರ ಜೊತೆ ಆತ ಸರಳವಾಗಿ ಬೆರೆಯುತ್ತಿದ್ದ. ಅವರೊಡನೆ ಉತ್ತಮ ಬಾಂಧವ್ಯ, ನಡವಳಿಕೆ ಇಟ್ಟುಕೊಂಡಿದ್ದ. ಶಿವ ತನಗೆ ನಟರಾಜನ ಕಲಾಕೃತಿಯ ಮಾರಾಟದಿಂದ ಬರುತ್ತಿದ್ದ ಹಣದಲ್ಲಿ ತಪ್ಪದೆ ಸ್ವಲ್ಪ ಭಾಗವನ್ನು ಬಡವರಿಗೆ, ದೀನದಲಿತರಿಗೆ, ಅಸಹಾಯಕರಿಗೆ ದಾನ ಮಾಡುತ್ತಿದ್ದ. ಆದರೆ ಅವನು ಅದನ್ನು ಯಾರಿಗೂ ತೋರಿಸಿಕೊಳ್ಳುತ್ತಿರಲಿಲ್ಲ. ಕೊಟ್ಟರೆ, 'ಕೊಟ್ಟೆ' ಎಂದು ಹೇಳಿಕೊಳ್ಳುತ್ತಿರಲಿಲ್ಲ. 'ಅದು ದೇವರು ಕೊಟ್ಟದ್ದು' ಅಂಥ ಹಂಚಿ, ತನಗೆ ತಾನೇ ಸಮಾಧಾನ ಪಡುತ್ತಿದ್ದ. ಅವನಲ್ಲಿ ಕರುಣೆಯ ಭಾವ ಮಡುಗಟ್ಟಿರುತ್ತಿತ್ತು. ಇವನಿಗೂ ಇಬ್ಬರು ಗಂಡುಮಕ್ಕಳಿದ್ದರು. ಕಿರಿಯವನು ಓದಿ ಉದ್ಯೋಗ ಹುಡುಕುತ್ತೇನೆಂದು ಹೇಳಿ ಪಟ್ಟಣಕ್ಕೆ ಹೊರಟು ಹೋಗಿದ್ದ. ಹಿರಿಯ ಮಗನಿಗೆ ಮದುವೆ ಮಾಡಿದ್ದ. ಅವನಿಗೆ ಒಬ್ಬಳು ಹೆಣ್ಣುಮಗಳು ಇದ್ದಳು. ಆಕೆಗೆ ತನ್ನ ತಾತನ ಕಲೆಯ ಬಗ್ಗೆ ತುಂಬಾ ಕುತೂಹಲವಿತ್ತು.

ಒಂದು ದಿನ ರಾಮ ಶಿವನ ಮನೆಗೆ ಬಂದು, 'ಈ ಸಾರಿ ಬೇಸಿಗೆಯಲ್ಲಿ ಕಾಶಿಗೆ ಹೋಗಿ ಬಂದು ಬಿಡುವಾ. ನಮ್ಮ ಹರಕೆಯ ದಿನಗಳನ್ನು ಮುಂದೆ ಹಾಕುವುದು ಬೇಡ. ಅಷ್ಟರಲ್ಲಿ ನಿನ್ನ ಕೆಲಸಗಳನ್ನೆಲ್ಲಾ ಮುಗಿಸಿಕೊ. ನಾನೂ ನನ್ನ ಮನೆಗೆಲಸಗಳನ್ನೆಲ್ಲಾ ಮುಗಿಸಿಕೊಳ್ಳುತ್ತೇನೆ' ಅಂಥ ಹೇಳಿದ. ಆಗ ಶಿವ, 'ನಾನು ಯಾವ ಸಮಯಕ್ಕೆ ಬೇಕಾದರೂ ಹೊರಡಲು ಸಿದ್ಧ. ಆದರೆ ನೀನೇ ನಿನ್ನ ಹೊಸಮನೆ ಕೆಲಸ ಮುಗಿದು ಬಿಡಲಿ ಅಂತೀಯಾ. ದೇಶಾಂತರ ಹೋದ ಮಗ ಬಂದು ಬಿಡಲಿ ಅಂತೀಯಾ. ಹೀಗೆ ಪ್ರತಿಸಲ ಕಾರಣಗಳನ್ನು ಹೇಳುತ್ತಲೇ ಕಾಶಿಯಾತ್ರೆಯ ದಿನವನ್ನು ಮುಂದೂಡುತ್ತಲೇ ಬಂದಿದ್ದೀಯಾ. ಮೊದಲು ನೀನು ಸಿದ್ಧನಾಗು. ಹೋಗುವಾ' ಎಂದ. ಇಬ್ಬರೂ ಈ ಸಾರಿ ತಪ್ಪಿಸುವುದು ಬೇಡ ಎಂಬ ನಿರ್ಧಾರಕ್ಕೆ ಬಂದು ಹೊರಡುವ ಸಿದ್ಧತೆಗಳನ್ನು ಮಾಡಿಕೊಳ್ಳಲು ನಿಶ್ಚಯಿಸಿದರು.

'ಈ ಸಾರಿ ನಿನ್ನನ್ನು ಕಾಯಿಸುವುದಿಲ್ಲ. ವಿಶ್ವನಾಥನ